


**SARAYU** - Kannada Monthly Regn. No. KARKAN/2014/62363
**July Vol. : 13 Issue : 2** 5128/ ಪರಾಭವ ಸಂವತ್ಸರ ಜುಲೈ 2026 ಪುಟ 8 **Rs. 10/-**

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

## ಶ್ರೀರಾಮ PreKG, LKG, UKG (ನರ್ಸರಿ ಸ್ಕೂಲ್) ತರಗತಿಗಳ ನೂತನ ಭವನ ಉದ್ಘಾಟನೆ

**12.06.2026**

ಶ್ರೀರಾಮ ಶಿಶುವಾಟಿಕ ತರಗತಿಗಳ ಉದ್ಘಾಟನೆಯನ್ನು ಡಾ. ಆರ್. ಕೆ. ಶೆಟ್ಟಿ, ಮುಂಬೈ ಇವರು ನೆರವೇರಿಸಿದರು. ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳ ಪ್ರವೇಶೋತ್ಸವ ಕಾರ್ಯಕ್ರಮದಲ್ಲಿ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪ್ರಭಾಕರ್ ಭಟ್ ಕಲ್ಲಡ್ಕ, ISSAR ಫೈನಾನ್ಸಿಯಲ್ ಸರ್ವಿಸಸ್ ಮುಂಬೈ, ಇದರ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಡಾ. ಆರ್ ಕೆ. ಶೆಟ್ಟಿ, ಪ್ರಗತಿ ಹಾಸ್ಪಿಟಲ್ ಪುತ್ತೂರು ಇಲ್ಲಿನ ಆಯುರ್ವೇದ ತಜ್ಞರಾದ ಡಾ. ಸುಧಾ ರಾವ್, ಜಿ.ಎಲ್ ಆಚಾರ್ಯ ಜ್ಯುವೆಲ್ಲರ್ಸ್ ಪುತ್ತೂರು ಇದರ ಆಡಳಿತ ಪಾಲುದಾರರಾದ ಶ್ರೀ ಲಕ್ಷ್ಮಿಕಾಂತ್ ಆಚಾರ್ಯ ಮತ್ತು ಜಿ. ಎಲ್. ಆಚಾರ್ಯ ಜ್ಯುವೆಲ್ಲರ್ಸ್ ಇದರ ಸಾಮಾಜಿಕ ಜಾಲತಾಣದ ಮುಖ್ಯಸ್ಥರಾದ ಶ್ರೀಮತಿ ವೇದ ಲಕ್ಷ್ಮೀಕಾಂತ್ ಆಚಾರ್ಯ, ಹಾಗೂ ರೈ ಸ್ಪೈಸಸ್ ಮಂಗಳೂರು ಇದರ ಮಾಲಕರಾದ ಶ್ರೀಮತಿ ದಿವ್ಯ ಸೋಹನ್ ರೈ, ಮತ್ತು ರಾಜ್ ಗ್ರೂಪ್ ಉಪ್ಪಿನಂಗಡಿ ಇದರ ಸಂಸ್ಥಾಪಕರಾದ ಶ್ರೀ ಕೃಷ್ಣ ರಾಜ್ ಹಾಗೂ ವಿದ್ಯಾಕೇಂದ್ರದ ಹಿರಿಯರಾದ ಶ್ರೀ. ಬಿ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ ಉಪಸ್ಥಿತರಿದ್ದರು.








### ಪ್ರಾಥಮಿಕ ಶಾಲೆ – ಪ್ರವೇಶೋತ್ಸವ : 19.06.2026

1ನೇ ತರಗತಿಯ ಪುಟಾಣಿಗಳನ್ನು ಅಧ್ಯಾಪಕ ವೃಂದದವರು ಪೂರ್ಣಕುಂಭ ಸ್ವಾಗತದೊಂದಿಗೆ ಕರೆತಂದು, ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕವನ್ನಿಟ್ಟು, ಸಿಹಿ ತಿನ್ನಿಸಿ ಬಾಳು ಬೆಳಕಾಗಲಿ ಎಂದು ಆಶೀರ್ವದಿಸಿದರು.

ಬೆಂಗಳೂರು ಸೋನಾ ಗ್ರೂಪ್ ಆಫ್ ಇಂಡಸ್ಟ್ರೀಸ್ ನಿರ್ದೇಕರಾದ ಶ್ರೀ ಯಜ್ಞನಾರಾಯಣ ಕಮ್ಮಾಜೆ, ಉಡುಪಿ ಎಪ್.ಪಿ.ಸಿ ಲಿಮಿಟೆಡ್‌ನ ಸಿ.ಎಂ.ಡಿ ಶ್ರೀ ಚಂದ್ರಕಾಂತ ರಾವ್ ಇನ್ನ, ಕೆರಾಡಿ ವರಸಿದ್ಧಿವಿನಾಯಕ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರೀ ಪ್ರದೀಪ್ ಶೆಟ್ಟಿ, ಬೆಂಗಳೂರು ಕ್ಷೇತ್ರಿಯ ಶಿಶುವಾಟಿಕಾ ಸಹ ಪ್ರಮುಖ ಶ್ರೀಮತಿ ತಾರಾ ಕಾಳಿಚರಣ್, ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷರು ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಮಾಜಿ ಸಚಿವರು ಶ್ರೀ ಕೃಷ್ಣ ಜೆ ಪಾಲೆಮಾರ್ ಮಕ್ಕಳಿಗೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಪವಿತ್ರವಾದ ಅಗ್ನಿಗೆ ಪ್ರಜ್ವಲಿಸಿ, ಅತಿಥಿ ಅಭ್ಯಾಗತರು ಘೃತಾಹುತಿ ಮಾಡಿದರು. ನಂತರ ಹೊಸದಾಗಿ ಸೇರಿದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಘೃತಾಹುತಿ ಮಾಡಿ, ಹಿರಿಯರಿಂದ ಆಶೀರ್ವಾದ ಪಡೆದುಕೊಂಡರು. ಸಂಸ್ಥೆಯ ಹಿರಿಯರು, ಅಡಳಿತ ಮಂಡಳಿ ಸದಸ್ಯರು, ಪೋಷಕರು ಉಪಸ್ಥಿತರಿದ್ದರು





## ಪ್ರೌಢಶಾಲೆ – ಆಗತ ಸ್ವಾಗತ ಕಾರ್ಯಕ್ರಮ







ಮಧುಕರ ಸಭಾಂಗಣದಲ್ಲಿ ನಡೆದ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳ ಆಗತ–ಸ್ವಾಗತ ಕಾರ್ಯಕ್ರಮದಲ್ಲಿ ಮಾನ್ಯ ಶ್ರೀ ಶಾಂತರಾಮ ಬುದ್ನಾ ಸಿದ್ದಿ (ಶಿರಸಿ, ಉತ್ತರ ಕನ್ನಡದ ವಿಧಾನ ಪರಿಷತ್ ಸದಸ್ಯರು), ಶ್ರೀ ದಿವಾಕರ ದಾಸ್ (ಚೆಯರ್‌ಮೆನ್ ಎಸ್.ಎಲ್.ವಿ. ಗ್ರೂಪ್, ಮೈಸೂರು) ಶ್ರೀ ನಿತೀಶ್ ಗೌಡ (ಮ್ಯಾನೇಜಿಂಗ್ ಪಾರ್ಟನರ್ ಬನ್ಯಾನ್ ಎಂಟರ್ಪ್ರೈಸಸ್, ಚಿಕ್ಕಮಗಳೂರು) ಶ್ರೀಮತಿ ಮೋನಿಶಾ ನರಸಿಂಹ ಮೂರ್ತಿ ಚಿಕ್ಕಮಗಳೂರು , ಶ್ರೀಮತಿ ನಾಗರತ್ನ ವಿಷ್ಣು ಹೆಬ್ಬಾರ್ (ಸ್ಥಾಪಕರು ಬೇಕಲ ಗೋಕುಲಂ ಗೋಶಾಲೆ ಪರಂಪರಾ ವಿದ್ಯಾಪೀಠಂ, ಅಲಕೋಡ್, ಕೇರಳ) ಶ್ರೀ ಸಂಜಯ್ ಮೇಲಾಂಟ(ಉದ್ಯಮಿ) ವಿಶ್ವಾಸ ರಾವ್ (ಸಾವಿತ್ರಿ ಮೆಮೊರಿಯಲ್ ಟ್ರಸ್ಟ್ ಮಂಗಳೂರು) ಶ್ರೀ ರಾಮದಾಸ್ ಶೆಟ್ಟಿ , ಉಪಸ್ಥಿತರಿದ್ದರು.ಕಾರ್ಯಕ್ರಮದಲ್ಲಿ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳು ಅಗ್ನಿಹೋತ್ರಕ್ಕೆ ಘೃತಾಹುತಿಯನ್ನು ಮಾಡಿ, ಭಾರತಾಂಬೆಗೆ ಪುಷ್ಪಾರ್ಚನೆ ಮತ್ತು ಹಿರಿಯರಿಂದ ತಿಲಕ ಧಾರಣೆಯೊಂದಿಗೆ ಆಶೀರ್ವಾದ ಪಡೆದರು. 2025–26ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

## ಪದವಿ ಪೂರ್ವ ವಿದ್ಯಾಲಯ – ಆಗತ ಸ್ವಾಗತ














ಆಜಾದ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಡುಪಿ ಎಸ್ ಕೆ ಪಿ ಗ್ರೂಪ್ ನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಸಂಪತ್ ಶೆಟ್ಟಿ, ರಾಜ್ಯ ಬಿಜೆಪಿ ವಕ್ತಾರರಾದ ಶ್ರೀಮತಿ ಸುರಭಿ ಹೊದಿಗೆರೆ, ಉಡುಪಿ ಎಸ್ ಕೆ ಪಿ ಗ್ರೂಪ್ ನ ಎಕ್ಸಿಕ್ಯೂಟಿವ್ ಡೈರೆಕ್ಟರ್ ಶ್ರೀಮತಿ ವಿನಯ ಶೆಟ್ಟಿ, ಜನರಲ್ ಮ್ಯಾನೇಜರ್ ಶ್ರೀ ಶ್ರೀನಿವಾಸ್ ಶೆಟ್ಟಿ, ಶ್ರೀರವೀಂದ್ರ ಮತ್ತು ಶ್ರೀಮತಿ ಉಷಾ ರವೀಂದ್ರ ಇಂಜಿನಿಯರ್ ದಕ್ಷ ಕನ್ಸಲ್ಟೆನ್ಸಿ ಪುತ್ತೂರು, ಕಹಳೆ ಸುದ್ದಿ ವಾಹಿನಿ ನಿರ್ದೇಶಕ ಶ್ಯಾಮ ಸುದರ್ಶನ್ ಭಾಗವಹಿಸಿದ್ದರು.

ಎರಡು ವಿಭಾಗದ ಕಾರ್ಯಕ್ರಮದಲ್ಲಿ ಡಾ। ಪ್ರಭಾಕರ ಭಟ್ ಕಲ್ಲಡ್ಕ, ಅಧ್ಯಕ್ಷತೆ ವಹಿಸಿದ್ದರು. ವಿದ್ಯಾಕೇಂದ್ರದ ಅಧ್ಯಕ್ಷರು ನಾರಾಯಣ ಸೋಮಯಾಜಿ, ಸಂಚಾಲಕರು ಶ್ರೀ ವಸಂತ ಮಾಧವ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಮುಖ್ಯೋಪಾಧ್ಯಾಯರು, ಪ್ರಾಂಶುಪಾಲರು, ವೇದಿಕೆಯಲ್ಲಿ ಉಪಸ್ಥಿತರಿದ್ದರು. ನೂತನ ವಿದ್ಯಾರ್ಥಿಗಳು ಹೋಮ ಕುಂಡಕ್ಕೆ ಅರ್ಘ್ಯವನ್ನು ಅರ್ಪಿಸಿ, ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಹಿರಿಯರಿಂದ ತಿಲಕ ಧಾರಣೆ ಮಾಡಿಸಿ, ಆಶೀರ್ವಾದ ಪಡೆದುಕೊಂಡರು.

## ವಿಶ್ವ ಪರಿಸರ ದಿನಾಚರಣೆ 05.06.2026



ಮಧುಕರ ಸಭಾಂಗಣದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಶ್ರೀ ಕಮಲಾಕ್ಷ ಶಂಭೂರು (ಮಂಗಳೂರು ಗ್ರಾಮಾಂತರ ಜಿಲ್ಲಾ ಪರ್ಯಾವರಣ ಸಂಯೋಜಕರು) ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಇವರು ಪರಿಸರದ ಮಹತ್ವ, ಅಲ್ಲದೆ "ಪರಿಸರ ದಿನವನ್ನು ಕೇವಲ ಈ ದಿನಕ್ಕೆ ಮೀಸಲಿಡದೆ ಪ್ರತಿದಿನವೂ ಪರಿಸರವನ್ನು ಉಳಿಸಿ ಬೆಳೆಸುವ ಪ್ರಯತ್ನವನ್ನು ಮಾಡಬೇಕೆಂದು ತಿಳಿಸಿದರು. ಧಾತ್ರಿ ಪರಿಸರ ಗೀತೆಯನ್ನು ಹಾಡಿದಳು, ಪರಿಸರ ದಿನಾಚರಣೆಯ ಅಂಗವಾಗಿ ನಡೆಸಿದ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಬಿನೀತ್ ವಿಶ್ವ ಪರಿಸರ ದಿನಾಚರಣೆಯ ಕುರಿತು ಮಾತನಾಡಿದನು. ಶ್ರೀ ಜಿನ್ನಪ್ಪ ಶ್ರೀಮಾನ್ ಪರಿಸರಕ್ಕೆ ಸಂಬಂಧಿಸಿದ ಘೋಷಣೆಯನ್ನು ವಿದ್ಯಾರ್ಥಿಗಳಿಂದ ಹೇಳಿಸಿದರು. ನಂತರ ಎನ್.ಸಿ.ಸಿ ವಿದ್ಯಾರ್ಥಿಗಳು ಶಾಲಾವರಣದಲ್ಲಿ ಗಿಡಗಳನ್ನು ನೆಟ್ಟರು. ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ ಎಂ ಮತ್ತು ಎನ್.ಸಿ.ಸಿ ಪ್ರಮುಖರಾದ ಶ್ರೀ ಪುರುಷೋತ್ತಮ ಇವರು ಉಪಸ್ಥಿತರಿದ್ದರು.







## ಅಮ್ಟೂರಿನಲ್ಲಿ ಕೃಷಿ ಚಟುವಟಿಕೆಯಲ್ಲಿ ಭಾಗಿ: 22–06–2026

ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಇಂಗ್ಲೀಷ್ ಮೀಡಿಯಂ ಸ್ಕೂಲ್, ಪಿಯುಸಿ ಹಾಗೂ ಪದವಿ ವಿಭಾಗದ ವಿದ್ಯಾರ್ಥಿಗಳು ಶ್ರೀರಾಮ ವಿದ್ಯಾಕೇಂದ್ರ–ಕ್ಕೆ ಸಂಬಂಧಿಸಿದ ಅಮ್ಟೂರಿನಲ್ಲಿ ಇರುವ ಕೃಷಿ ಜಾಗಕ್ಕೆ ತೆರಳಿ ಗಿಡ ನಾಟಿಗಾಗಿ ನಾಟಿಯ ಅಂತರವನ್ನು ಗುರುತಿಸಿದರು. ಈ ಸಂದರ್ಭದಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಚಾಲಕ ವರ್ಗದವರು ಸಹಕರಿಸಿದರು.

## ಸುಭಾಷಿತ ಮಂಜರಿ

ಆತ್ಮಾ ಜೇಯಃ ಸದಾ ರಾಜ್ಞಾ
ತತೋ ಜೇಯಾಶ್ಚ ಶತ್ರವಃ ।
ಅಜಿತಾತ್ಮಾ ನರಪತಿ:
ವಿಜಯೇತ ಕಥಂ ರಿಪೂನ್ ॥

ರಾಜನು ಮೊದಲು ತನ್ನನ್ನು ಗೆದ್ದುಕೊಳ್ಳಬೇಕು. ಆಮೇಲೆ ವೈರಿಗಳನ್ನು ಗೆಲ್ಲಬೇಕು. ತನ್ನನ್ನೇ ಗೆದ್ದುಕೊಳ್ಳದ ಅಜಿತೇಂದ್ರಿಯನಾದ ರಾಜನು ವೈರಿಗಳನ್ನು ಹೇಗೆ ಗೆದ್ದಾನು ?

### ಸಂಪಾದಕೀಯ

ಮತ್ತೆ ಹೊಸ ಶೈಕ್ಷಣಿಕ ವರ್ಷ 2026 – 27ರ ಜೂನ್ ತಿಂಗಳ ವರದಿಯನ್ನು ಹೊತ್ತು ಸರಯೂ ಬಂದಿದೆ. ಶಾಲಾರಂಭದ ವೈಭವ ಕಾರ್ಯಕ್ರಮದ ಜೊತೆಗೆ ಎಲ್ಲಾ ವಿಭಾಗಗಳ ಆಗತ ಸ್ವಾಗತ ಕಾರ್ಯಕ್ರಮಗಳಲ್ಲಿ ಅನೇಕ ಗಣ್ಯರು ಭಾಗವಹಿಸಿ ನಮ್ಮ ಕಾರ್ಯವನ್ನು ಮೆಚ್ಚಿಕೊಂಡಿರುತ್ತಾರೆ. ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಿರೀಕ್ಷೆಗೂ ಮೀರಿ ಸಂಖ್ಯೆ ದಾಖಲಾದುದರಿಂದ ಅದಕ್ಕಾಗಿ ಹೊಸ ವಿಭಾಗವನ್ನೇ ಆರಂಭಿಸಲಾಗಿದೆ. ಶ್ರೀರಾಮ ಶಿಶುವಾಟಿಕಾ ಎಂಬ ಹೆಸರಿನಲ್ಲಿ ಹೊಸ ಶಾಲಾ ಪರಿಸರ ನಿರ್ಮಾಣವಾಗಿದೆ.. ಅವೆಲ್ಲದರ ವರದಿಯೊಂದಿಗೆ ಈ ಬಾರಿಯ ಸರಯೂ ಬಂದಿದೆ.

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ರಮ್ಯ(ಶಿಶುಮಂದಿರ)
ಮಾಲತಿ(ಪ್ರಾಥಮಿಕ ಶಾಲೆ)
ನಿಕ್ಷಿತಾ (ಪ್ರೌಢಶಾಲೆ)
ದೀಪಿಕಾ (ಪಿಯುಸಿ)
ಅನನ್ಯ (ಪದವಿ)
ಉಷಾ(ಇಂಗ್ಲೀಷ್ ಮೀಡಿಯಂ ಸ್ಕೂಲ್)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


### ಹಿಂದೂ ಸಾಮ್ರಾಜ್ಯೋತ್ಸವ 15.6.2026

ಈ ಕಾರ್ಯಕ್ರಮಕ್ಕೆ ಅತಿಥಿಯಾಗಿ ಶ್ರೀರಾಮ ಶಿಶು ಮಂದಿರದ ವ್ಯವಸ್ಥಾಪಕರಾದ ಶ್ರೀಮತಿ ಸುಧಾ ಎಸ್ ಭಟ್ ಕಶೆಕೋಡಿ ಇವರು ಆಗಮಿಸಿ, ಶಿವಾಜಿಯ ಜೀವನದ ಘಟನೆಯನ್ನು ಕಥೆಯ ಮೂಲಕ ತಿಳಿಸಿಕೊಟ್ಟರು.

### ವಿಶ್ವ ಯೋಗ ದಿನಾಚರಣೆ 22.06.2026



ಶ್ರೀರಾಮ ಶಿಶುಮಂದಿರದ ಶ್ರೀ ಲಕ್ಷ್ಮೀಯಲ್ಲಿ, ಅದೇ ರೀತಿ ಶ್ರೀ ಕೃಷ್ಣ ಶಿಶುಮಂದಿರ ಕಂದೂರು ಸಜೀಪ, ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ, ಶ್ರೀಗಣೇಶ ಶಿಶುಮಂದಿರ ಬೊಂಡಲ,ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿ ಮಕ್ಕಳಿಗೆ ಸುಲಭ ಯೋಗಾಸನಗಳನ್ನು ಮಾಡಿಸಲಾಯಿತು.

## ಪ್ರಾಥಮಿಕ ಶಾಲೆ

### ಹೆಣ್ಣು ಮಕ್ಕಳ ಕ್ಷೇಮ ಮತ್ತು ಆರೋಗ್ಯ ಮಾಹಿತಿ ಕಾರ್ಯಕ್ರಮ : 03.06.2026

ಹಿರಿಯ ವಿಭಾಗದ ವಿದ್ಯಾರ್ಥಿನಿಯರಿಗೆ ಆಯೋಜಿಸಿದ ಹೆಣ್ಣುಮಕ್ಕಳ ಆರೋಗ್ಯ ಸುರಕ್ಷತೆ ಹಾಗೂ ವೈಯುಕ್ತಿಕ ಸ್ವಚ್ಛತೆ ಬಗ್ಗೆ ಮಾಹಿತಿ ಕಾರ್ಯಕ್ರಮವನ್ನು ವಿದ್ಯಾರ್ಥಿ ಕ್ಷೇಮ ಪಾಲನ ಸಮಿತಿ ವತಿಯಿಂದ ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್.ಭಟ್ ಹಾಗೂ ಶ್ರೀಮತಿ ರಾಜೇಶ್ವರಿ ಎಂ ಮಾಹಿತಿಯನ್ನು ನೀಡಿದರು. ಅಧ್ಯಾಪಕ ವೃಂದದವರು ಉಪಸ್ಥಿತರಿದ್ದರು.

### ರಾಜ್ಯಮಟ್ಟದ ಕಥೆ ಹೇಳುವ ಸ್ಪರ್ಧೆ ಪ್ರಥಮ :6.6.26

3ನೇ ನೇತಾಜಿ ತರಗತಿಯ ಅಹನ್ಚಂದ್ರ ಆಚಾರ್ಯ



'ಹಿರಿಯ ಸಾಹಿತಿ ಡಾ. ನಾ. ಡಿಸೋಜಾ ಅವರ 89ನೇ ಜನ್ಮದಿನೋತ್ಸವದ ಅಂಗವಾಗಿ ಮಕ್ಕಳಿಗಾಗಿ ವೀಡಿಯೊ ಮುಖಾಂತರ ನಡೆದ ರಾಜ್ಯ ಮಟ್ಟದ ಕಥೆ ಹೇಳುವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

### ವಿಶ್ವ ಪರಿಸರ ದಿನಾಚರಣೆ : 05.06.2025

ಮುಖ್ಯೋಪಾಧ್ಯಾಯರು ಶ್ರೀ ರವಿರಾಜ್ ಕಣಂತೂರು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ, ದೀಪ ಪ್ರಜ್ವಲನೆ ಮಾಡಿದರು. ಅಧ್ಯಾಪಕರಾದ ಶ್ರೀಮತಿ ಭವ್ಯಶ್ರೀ ಪರಿಸರ ದಿನದ ಮಹತ್ವವನ್ನು ತಿಳಿಸಿದರು. ವಿದ್ಯಾರ್ಥಿನಿಯರಾದ ಭೂಮಿಕಾ, ನಿಹಾರಿಕ ಎಂ ಪರಿಸರ ಗೀತೆಯನ್ನು ಹಾಡಿದರು.

### ಅಧ್ಯಾಪಕರ ಬೈಠಕ್: 6–06–2026

ದಧೀಚಿ ಕೊಠಡಿಯಲ್ಲಿ ಅಧ್ಯಾಪಕರ ಬೈಠಕ್ ಮುಖ್ಯೋಪಾಧ್ಯಾಯರ ಮಾರ್ಗದರ್ಶನದಲ್ಲಿ ನಡೆಯಿತು. ಪ್ರವೇಶೋತ್ಸವ ಕಾರ್ಯಕ್ರಮ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಕುರಿತು ಚರ್ಚಿಸಲಾಯಿತು.

### ವಿಜ್ಞಾನ ಕಾರ್ಯಾಗಾರದಲ್ಲಿ ಭಾಗಿ: 8.06.2026



ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್‌ನ ವಿಶ್ವೇಶ್ವರ ಸಭಾಂಗಣದಲ್ಲಿ ಸಾಮಾನ್ಯ ವಿಜ್ಞಾನ ಕಾರ್ಯಾಗಾರ ಜೂನ್ 8 ರಂದು ನಡೆಯಿತು. ಪ್ರಾಥಮಿಕ ವಿಭಾಗದಿಂದ ಅಧ್ಯಾಪಕರಾದ ಶ್ರೀಮತಿ ಜ್ಯೋತಿಶ್ರೀ, ಕು. ಸ್ಫೂರ್ತಿಕಾ, ಭಾಗವಹಿಸಿದರು.

### ಕಲಾಪ್ರಕಾರಗಳ ಉದ್ಘಾಟನೆ : 11.06.2026



2026–27ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ಕಲೆಗಳಾದ ಸಂಗೀತ, ಭರತನಾಟ್ಯ , ಯಕ್ಷಗಾನ, ಚಿತ್ರಕಲೆ, ಕರಾಟೆ, ರೋಬೋಟಿಕ್ಸ್ ಮಾಡೆಲಿಂಗ್ ಕಲಾಪ್ರಕಾರಗಳು ಶ್ರೀರಾಮನಿಗೆ ಕ್ಷೀರಾಭಿಷೇಕ ಮಾಡುವುದರ ಮೂಲಕ ಉದ್ಘಾಟನೆಯಾಯಿತು.

ಕಟೀಲು ಯಕ್ಷಗಾನ ಮೇಳದ ಕಲಾವಿದರಾದ ಶ್ರೀಯುತ ಮೋಹನ್ ಅಮ್ಮುಂಜೆ, ಭರತನಾಟ್ಯ ಗುರುಗಳಾದ ಶ್ರೀಯುತ ವಿದ್ವಾನ್ ಬಿ. ಗಿರೀಶ್ ಕುಮಾರ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ವಿದ್ಯಾರ್ಥಿನಿಯರು ಸಮೂಹಗೀತೆ ಹಾಡಿದರು. ವೇದಿಕೆಯಲ್ಲಿ ಸಂಗೀತ ಗುರುಗಳಾದ ಶ್ರೀಯುತ ವಿದ್ವಾನ್ ಕೃಷ್ಣ ಆಚಾರ್ ಹಾಗೂ ಮುಖ್ಯೋಪಾಧ್ಯಾಯರು ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

### ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ: 13.6.26



ಪ್ರಾಥಮಿಕ ವಿಭಾಗದ 3ನೇ ತರಗತಿಯ ನಿಧಿ ಕೈರಂಗಳ ಇವಳು ವಿಟ್ಲ ರಾಮಮಂದಿರದಲ್ಲಿ ನಡೆದ ಗರಿಗಳ ಕಥೆ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ 1ರಿಂದ 4ನೇ ತರಗತಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾನೆ.

**ಇಂಗ್ಲೀಷ್, ವಿಜ್ಞಾನ, ಗಣಿತ ಪ್ರಾಂತಿಯ ಕಾರ್ಯಾಗಾರದಲ್ಲಿ ಭಾಗಿ 13 ಮತ್ತು 14.6.26**



ಜನಸೇವಾ ವಿದ್ಯಾಕೇಂದ್ರ ಚನ್ನೇನಹಳ್ಳಿ ಬೆಂಗಳೂರು ಇಲ್ಲಿ ವಿದ್ಯಾಭಾರತಿ ಕರ್ನಾಟಕ ಇದರ ವತಿಯಿಂದ ನಡೆದ ವಿಜ್ಞಾನ , ಗಣಿತ ಮತ್ತು ಇಂಗ್ಲೀಷ್ ಶಿಕ್ಷಕರ 2 ದಿನದ ಪ್ರಾಂತೀಯ ಕಾರ್ಯಾಗಾರದಲ್ಲಿ ಪ್ರಾಥಮಿಕ ವಿಭಾಗದ ಅಧ್ಯಾಪಕರಾದ ಶ್ರೀಮತಿ ರಾಜೇಶ್ವರಿ, ಕು.ಸ್ಫೂರ್ತಿಕಾ, ಕು.ವಾಣಿಶ್ರೀ ಭಾಗವಹಿಸಿರುತ್ತಾರೆ.

**ಚಿನ್ನದ ಪದಕ: 20.06.2026**



ಪ್ರಾಥಮಿಕ ಶಾಲೆಯ 6ನೇ ತರಗತಿಯ ವಿದ್ಯಾರ್ಥಿನಿ ಶ್ರಾವಣಿ ದೀಪ ಆನ್ಲೈನ್‌ನಲ್ಲಿ ನಡೆದ ಭಗವದ್ಗೀತಾ ಪಾರಾಯಣದಲ್ಲಿ ಚಿನ್ನದ ಪದಕವನ್ನು ಪಡೆದು, ಹರಿಯಾಣದ ಕುರುಕ್ಷೇತ್ರದಲ್ಲಿ ಸಹಸ್ರ ಗೀತಾ ಕಂಠನಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿಯನ್ನು ಪಡೆದಿರುತ್ತಾಳೆ ಹಾಗೂ ಕಳೆದ ವರ್ಷ ಉಡುಪಿಯಲ್ಲಿ ನಡೆದ ಲಕ್ಷ ಕಂಠ ಗೀತ ಗಾಯನದಲ್ಲಿ ಭಾಗವಹಿಸಿರುತ್ತಾಳೆ. ಗೀತ ಪರಿವಾರದ ಸಂಸ್ಥಾಪಕರಾದ ಸ್ವಾಮಿ ಶ್ರೀ ಗೋವಿಂದ ದೇವ್ ಗಿರಿ ಮಹಾರಾಜರ ಗೀತ ಪರಿವಾರದ ಬಳಗದಲ್ಲಿ ಸೇರಿ ಭಗವದ್ಗೀತೆಯ ಅಭ್ಯಾಸವನ್ನು ಉಮಾರಾವ್ ಅವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುತ್ತಿದ್ದಾಳೆ. ಈಕೆ ಶ್ರೀ ಸಂದೀಪ್ ಶೇಖರ್ ಮತ್ತು ಶ್ರೀಮತಿ ದಿವ್ಯ ಮೆಲ್ಕಾರ್ ಇವರ ಪುತ್ರಿಯಾಗಿರುತ್ತಾಳೆ. ಇವಳನ್ನು ಶಾಲಾ ವತಿಯಿಂದ ಅಭಿನಂದಿಸಿದರು.

**ಮಾದಕ ದ್ರವ್ಯ ಮಾರಾಟ ಹಾಗೂ ಸೇವನೆ ನಿಷೇಧದ ಬಗ್ಗೆ ಮಾಹಿತಿ : 19–06–2026**

ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯ ಮಾರಾಟ ಹಾಗೂ ಸೇವನೆ ನಿಷೇಧ ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಹ ಮುಖ್ಯೋಪಾಧ್ಯಾಯರಾದ ಶ್ರೀ ಸುಮಂತ್ ಆಳ್ವ ಎಂ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಅಧ್ಯಾಪಕರಾದ ಶ್ರೀಮತಿ ರಾಜೇಶ್ವರಿ, ಶ್ರೀಮತಿ ಕುಸುಮಾ, ಶ್ರೀಮತಿ ಯಕ್ಷಿತಾ ಉಪಸ್ಥಿತರಿದ್ದರು.

**ಶಾಲಾ ಸಂಸತ್ತು ಚುನಾವಣೆ : 25.06.2026**



2026–27 ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳ ಶಾಲಾ ಸಂಸತ್ತು ಚುನಾವಣೆಯು ನಡೆಯಿತು. ವಿದ್ಯಾರ್ಥಿಗಳು ಗುರುತಿನ ಚೀಟಿಯನ್ನು ತೋರಿಸಿ, ಆ್ಯಪ್‌ನ ಮೂಲಕ ಮತವನ್ನು ಚಲಾಯಿಸಿದರು.

**ಸಮಾಜ–ವಿಜ್ಞಾನ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರದಲ್ಲಿ ಭಾಗಿ : 25–06–2026**

ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್‌ನ ವಿಶ್ವೇಶ್ವರ ಸಭಾಂಗಣದಲ್ಲಿ ಸಮಾಜ ವಿಜ್ಞಾನ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರ ಜೂನ್ 25ರಂದು ನಡೆಯಿತು. ಪ್ರಾಥಮಿಕ ವಿಭಾಗದಿಂದ ಅಧ್ಯಾಪಕರಾದ ಶ್ರೀಮತಿ ಯಕ್ಷಿತಾ, ಶ್ರೀ ಗಗನ್ ದೀಪ್, ಶ್ರೀಮತಿ ಶಿಲ್ಪಾ ಭಾಗವಹಿಸಿದರು.

**ಹಿಂದೂ ಸಾಮ್ರಾಜ್ಯ ದಿನೋತ್ಸವ ಹಾಗೂ ಹುಟ್ಟುಹಬ್ಬ ಕಾರ್ಯಕ್ರಮ**



ವೇದವ್ಯಾಸ ಧ್ಯಾನ ಮಂದಿರದಲ್ಲಿ ಶಿವಾಜಿಯ ಪಟ್ಟಾಭಿಷೇಕ ದಿನವನ್ನು "ಹಿಂದೂ ಸಾಮ್ರಾಜ್ಯೋತ್ಸವ" ದಿನ ಹಾಗೂ ಮೇ ಮತ್ತು ಜೂನ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಸಾಮೂಹಿಕ ಹುಟ್ಟು ಹಬ್ಬ ಹಾಗೂ ಭಜನಾ ಕಾರ್ಯಕ್ರಮ ಆಚರಿಸಲಾಯಿತು. ಶ್ರೀರಾಮ ಪ್ರೌಢ ಶಾಲೆಯ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ ರಾಧಾಕೃಷ್ಣ ಅಡ್ಯಂತಾಯ ಮಾತನಾಡಿ ಶಿವಾಜಿಯ ಬಾಲ್ಯದ ಕಥೆ, ಶೌರ್ಯವನ್ನು ವಿವರಿಸುತ್ತಾ ಮಕ್ಕಳಿಗೆ ಶುಭ ಹಾರೈಸಿದರು. ಹುಟ್ಟುಹಬ್ಬದ ನಿಮಿತ್ತ 7ನೇ ತರಗತಿ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನಡೆಯಿತು.ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಚಂದ್ರಶೇಖರ್ ಸಾಲಿಯಾನ್, ಹಾಗೂ ಶಾಲಾ ಮುಖ್ಯೋಪಾಧ್ಯಾಯರು, ಸಹಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

**ಇಂಗ್ಲೀಷ್ ಕಾರ್ಯಾಗಾರದಲ್ಲಿ ಭಾಗಿ:**

ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜ್‌ನ ವಿಶ್ವೇಶ್ವರ ಸಭಾಂಗಣದಲ್ಲಿ ಇಂಗ್ಲೀಷ್ ಭಾಷಾ ಕಾರ್ಯಾಗಾರ ಜೂನ್ 29ರಂದು ನಡೆಯಿತು. ಪ್ರಾಥಮಿಕ ವಿಭಾಗದಿಂದ ಅಧ್ಯಾಪಕರಾದ ಶ್ರೀಮತಿ ರಾಜೇಶ್ವರಿ, ಶ್ರೀಮತಿ ಕುಸುಮ, ಶ್ರೀಮತಿ ನಳಿನಾಕ್ಷಿ, ಶ್ರೀಮತಿ ದಿವ್ಯ ಕೆ, ಶ್ರೀಮತಿ ಚಂದ್ರಾವತಿ, ಶ್ರೀಮತಿ ರಮ್ಯ, ಕು. ವಿಜೇತ, ಶ್ರೀ ಬಾಲಕೃಷ್ಣ ಭಾಗವಹಿಸಿದರು.

## ಪ್ರೌಢಶಾಲೆ

**ಬಾಲಕಿಯರಿಗೆ ಆಪ್ತ ಸಲಹೆ 02.6.2026**

ಮಧುಕರ ಸಭಾಂಗಣದಲ್ಲಿ ಶಿಕ್ಷಕಿಯರಾದ ಶ್ರೀಮತಿ ಗಾಯತ್ರಿ ಮಾತಾಜಿ, ಶ್ರೀಮತಿ ಸೌಮ್ಯ ಭಟ್ ಮಾತಾಜಿ ಮತ್ತು ಶ್ರೀಮತಿ ವಿನುತ ಮಾತಾಜಿ ಹದಿಹರೆಯದ ಬಾಲಕಿಯರಿಗೆ ಸಮಸ್ಯೆಗಳನ್ನು ತಿಳಿಸಿ ಆ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಿದರು.

**ಘೋಷ್ ವಾದನದ ಪರಿಚಯ 6.06.2026**



ಮಧುಕರ ಸಭಾಂಗಣದಲ್ಲಿ ಸರಸ್ವತಿ ವಂದನ ಕಾರ್ಯಕ್ರಮದಲ್ಲಿ ಶ್ರೀ ಉಮೇಶ್ ಕುಲಕರ್ಣಿ ಘೋಷ್ ವಾದನದ ವಿವಿಧ ಪರಿಕರಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದರು.

**ವಿಜ್ಞಾನ ಕಾರ್ಯಾಗಾರ 8.6.2826**

ವಿವೇಕಾನಂದ CBSC ನೆಹರು ನಗರ ಪುತ್ತೂರು ಇಲ್ಲಿ ನಡೆದ ವಿಜ್ಞಾನ ಕಾರ್ಯಾಗಾರದಲ್ಲಿ ಶ್ರೀ ರಾಮ ಪ್ರೌಢ ಶಾಲೆಯ ವಿಜ್ಞಾನ ಶಿಕ್ಷಕರಾದ ಶ್ರೀಮತಿ ಲೋಕಾಕ್ಷಿ, ಮತ್ತು ಮೇಘಶ್ರೀ ಭಾಗವಹಿಸಿದರು.

**ಅತಿಥಿಗಳ ಭೇಟಿ 11.06.2026**

ಶ್ರೀ ಅನಿಲ್ ಪೆರಾಜೆ (ಪೆರ್ನೆ ಶ್ರೀರಾಮಚಂದ್ರ ಕಾಲೇಜಿನ ಉಪನ್ಯಾಸಕರು, ಸಂಸ್ಕೃತಿ ಪ್ರತಿಷ್ಠಾನ ಪುತ್ತೂರಿನ ಜಿಲ್ಲಾ ವ್ಯವಸ್ಥಾಪಕರು), ಸೀತಾರಾಮ್ ಭಟ್ (ನಿವೃತ್ತ ಅಧ್ಯಾಪಕರು, ವಿಶ್ವ ಹಿಂದೂ ಪರಿಷತ್ತಿನ ಸೇವಾ ಪ್ರಮುಖರು), ರಾಜಾರಾಮ್ ಐತಾಳ್ ದಾಸಕೋಡಿ (ನಿವೃತ್ತ ಬ್ಯಾಂಕ್ ಮ್ಯಾನೇಜರ್) ಮಧುಕರ ಸಭಾಂಗಣದಲ್ಲಿ ನಡೆದ ಸರಸ್ವತಿ ವಂದನೆಯಲ್ಲಿ ಭಾಗವಹಿಸಿದವರು.

**ಯಕ್ಷಧ್ರುವ ಯಕ್ಷ ಶಿಕ್ಷಣ ತರಬೇತಿ ಉದ್ಘಾಟನಾ ಕಾರ್ಯಕ್ರಮ :15.06.2026**



ಯಕ್ಷಧ್ರುವ ಯಕ್ಷಶಿಕ್ಷಣ ತರಬೇತಿ ಉದ್ಘಾಟನಾ ಕಾರ್ಯಕ್ರಮವನ್ನು ಅತಿಥಿ ಅಭ್ಯಾಗತರು ದೀಪ ಪ್ರಜ್ವಲಿಸುವ ಮೂಲಕ ಉದ್ಘಾಟಿಸಿದರು. ಧಾತ್ರಿ ಮತ್ತು ಶರಣ್ಯ ದೇವರ ಸ್ತುತಿಯನ್ನು ಹಾಡಿದರು. ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಇವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ವೇದಿಕೆಯಲ್ಲಿ ಇನ್ನೋರ್ವ ಅತಿಥಿಯಾದ ಶ್ರೀಯುತ ಪಿ ಪೂವಪ್ಪ ಶೆಟ್ಟಿ (ನಿವೃತ್ತ ಉಪನ್ಯಾಸಕರು, ಪ್ರಧಾನ ಅಧ್ಯಕ್ಷರು ವಿಟ್ಲ ಘಟಕ), ಶ್ರೀ ಅಮ್ಮುಂಜೆ ಮೋಹನ್ ಕುಮಾರ್ ಯಕ್ಷಗಾನ ಶಿಕ್ಷಕರು ಇವರು ವಿದ್ಯಾರ್ಥಿಗಳಿಗೆ ಯಕ್ಷಗಾನದ ಮೊದಲ ಹೆಜ್ಜೆಯ ತರಬೇತಿಯನ್ನು ಕೊಟ್ಟರು.

**ನೂಲಿನ ಕಲೆ ಮತ್ತು ಕಸೂತಿಯ ಮಾಹಿತಿ 15.6.26**

ರಾಜಸ್ಥಾನದ ಶ್ರೀ ಗೋವಿಂದರಾವ್ ಇವರು ವಿದ್ಯಾರ್ಥಿಗಳಿಗೆ ನೂಲಿನ ಕಲೆ ಮತ್ತು ಕಸೂತಿಯ ಬಗ್ಗೆ ಮಾಹಿತಿಯನ್ನು ನೀಡಿದರು.

**ಹಿಂದೂ ಸಾಮ್ರಾಜ್ಯ ದಿನೋತ್ಸವ ಮತ್ತುಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮ 27.06.2026**




ಸಾಮೂಹಿಕ ಹುಟ್ಟುಹಬ್ಬ ಭಜನೆ ಮತ್ತು ಹಿಂದೂ ಸಾಮ್ರಾಜ್ಯ ದಿನೋತ್ಸವ ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರು, ಕರ್ನಾಟಕ ದಕ್ಷಿಣ ಪ್ರಾಂತದ ಹಿಂದೂ ಜಾಗರಣ ವೇದಿಕೆಯ ಕಾರ್ಯಕಾರಿಣಿ ಸದಸ್ಯರಾದ ಶ್ರೀ ರಾಧಾಕೃಷ್ಣ ಅಡ್ಯಂತಾಯರು. ಇವರು ಭಜನೆಯ ಮಹತ್ವ ತಿಳಿಸಿದರು. ವೇದಿಕೆಯಲ್ಲಿ ಮುಖ್ಯ ಗುರುಗಳಾದ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮವು ನೆರವೇರಿತು.

**ಸಂಸ್ಕೃತ ಸಂಭಾಷಣ ಶಿಬಿರ 11.06.2026**

ಸಂಸ್ಕೃತ ಸಂಭಾಷಣ ಶಿಬಿರದ ಪ್ರಾರಂಭೋತ್ಸವ ಕಾರ್ಯಕ್ರಮವು ಪ್ರೌಢಶಾಲೆಯ ಮುಖ್ಯ ಗುರುಗಳಾದ ಗೋಪಾಲ್ ಶ್ರೀಮಾನ್ ಇವರು ದೀಪ ಪ್ರಜ್ವಲನದ ಮೂಲಕ ನಡೆಸಿದರು. ಸಂಸ್ಕೃತ ಅಧ್ಯಾಪಕರಾದ ಜಯರಾಮ್ ಶ್ರೀಮಾನ್ ನಿರ್ವಹಿಸಿ, ದೀಕ್ಷಿತಾ ಮಾತಾಜಿ ವಂದಿಸಿದರು.

**ಜಿಲ್ಲಾಮಟ್ಟದ ಚಿತ್ರಕಲೆ ಸ್ಪರ್ಧೆಯಲ್ಲಿ ಭಾಗಿ 28.6.26**



ಮಾಲಿನ್ಯ ನಿಯಂತ್ರಣ ಮಂಡಳಿ ಸಹಭಾಗಿತ್ವದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ದೀಕ್ಷಾ ಮತ್ತು ಸಾನಿಕ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದರು.

**ಸಮಾಜ ವಿಜ್ಞಾನ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರ 25.6.2026**

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು ಪುತ್ತೂರಿನ ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಸಮಾಜ ವಿಜ್ಞಾನ ಶಿಕ್ಷಕರ ಪುನಃ ಚೇತನ ಕಾರ್ಯಾಗಾರವು ನಡೆಯಿತು. ಈ ಕಾರ್ಯಾಗಾರದಲ್ಲಿ ಮಲ್ಲಿಕಾ ಮಾತಾಜಿ ನಿಕ್ಷಿತ ಮಾತಾಜಿ ಸಾಹಿತ್ಯ ಮಾತಾಜಿ ಮತ್ತು ದೀಪ ಮಾತಾಜಿ ಭಾಗವಹಿಸಿದರು.

**ಘೋಷ್ ಸಂಯೋಜಕರ ಸಭೆಯಲ್ಲಿ ಭಾಗಿ 15.6.26**

ವಿವೇಕಾನಂದ ವಿದ್ಯಾವರ್ಧಕ ಸಂಘದ ನರೇಂದ್ರ ಆಡಳಿತ ಕಚೇರಿಯಲ್ಲಿ ನಡೆದ ಘೋಷ್ ಸಂಯೋಜಕರ ಸಭೆಯಲ್ಲಿ ಪ್ರೌಢ ಶಾಲೆಯ ದೀಕ್ಷಿತ ಮಾತಾಜಿ ಭಾಗವಹಿಸಿದರು

**2026–27ನೇ ಶೈಕ್ಷಣಿಕ ಸಾಲಿನ ಕ್ರೀಡಾಕೂಟ ಪಂದ್ಯಾಟಗಳ ಪೂರ್ವಭಾವಿ ಸಭೆ 29.6.2025**

ಬೆಸ್ಟ್ ಆಂಗ್ಲಮಾಧ್ಯಮ ಶಾಲೆಯಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟ ಪಂದ್ಯಾಟಗಳ ಪೂರ್ವಭಾವಿ ಸಭೆಯಲ್ಲಿ ರಮ್ಯ ಮಾತಾಜಿ ಭಾಗವಹಿಸಿದರು.

**ಇಂಗ್ಲೀಷ್ ಕಾರ್ಯಾಗಾರದಲ್ಲಿ ಭಾಗಿ 30.6.2026**

ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಇಂಗ್ಲೀಷ ಗ್ರಾಮರ್ ಅಂಡ್ ಕಮ್ಯುನಿಕೇಶನ್ ಕಾರ್ಯಾಗಾರದಲ್ಲಿ ಪ್ರೌಢಶಾಲಾ ವಿಭಾಗದ ಶ್ರೀಮತಿ ಚೈತ್ರ ಭಾಗವಹಿಸಿದ್ದರು

## ಇಂಗ್ಲೀಷ್ ಮೀಡಿಯಂ

**ಸಹ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮ 20/06/2026**




ಶಂಕರಾಚಾರ್ಯ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಅತಿಥಿಗಳು ದೀಪ ಪ್ರಜ್ವಲನೆಯ ಮೂಲಕ ಚಾಲನೆ ನೀಡಿದರು. ನಂತರ ಅಭ್ಯಾಗತರು ಕೃಷ್ಣನಿಗೆ ಕ್ಷೀರಾಭಿಷೇಕ ಮಾಡುವ ಮೂಲಕ ಹಾಗೂ ನಾದಸ್ವರ ವಾದನಗಳೊಂದಿಗೆ ಭರತನಾಟ್ಯ, ಸಂಗೀತ, ಕರಾಟೆ, ಸ್ಕೇಟಿಂಗ್, ತರಗತಿಗಳ ಉದ್ಘಾಟನಾ ಕಾರ್ಯಕ್ರಮ ನೆರವೇರಿತು. ಯಕ್ಷಗಾನ ಗುರುಗಳಾದ ಶ್ರೀ ಅಶ್ವಥ್ ಮಂಜನಾಡಿಯವರು ಮಾತನಾಡಿ " ಸಮುದ್ರದಲ್ಲಿ ಅಲೆ ಮರದಲ್ಲಿ ಎಲೆ ಹಾಗೆಯೇ ಜೀವನದಲ್ಲಿ ಕಲೆ ಎಂಬುದು ಮುಖ್ಯವಾಗಿದೆ" ಎಂದರು. ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ, ಸಂಗೀತ ಗುರುಗಳಾದ ಶ್ರೀ ಕೃಷಾಚಾರ್ಯ ಬಂಟ್ವಾಳ, ಭರತನಾಟ್ಯ ಗುರುಗಳಾದ ಶ್ರೀಮತಿ ಪ್ರಭ. ಬಿ. ಶಂಕರ್, ಕರಾಟೆ ಗುರುಗಳಾದ ಶ್ರೀ ಸತೀಶ್, ಹಾಗೂ ಸ್ಕೇಟಿಂಗ್ ತರಬೇತುದಾರರಾದ ಶ್ರೀ ಸಾವನ್, ಹಾಗೂ ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್, ಹಾಗೂ ಸಹಪಠ್ಯೇತರ ಚಟುವಟಿಕೆಗಳ ಸಂಯೋಜಕರಾದ ಶ್ರೀ ನಿತಿನ್ ಶ್ರೀಮಾನ್ ರವರು ಉಪಸ್ಥಿತರಿದ್ದರು.

**ಪ್ರಥಮ ಸ್ಥಾನ: ಚಿತ್ರಕಲಾ ಸ್ಪರ್ಧೆ**



9ನೇ ತರಗತಿಯ ನಿನಾದ್ ಕೈರಂಗಳ ವಿಟ್ಲ ರಾಮ ಮಂದಿರದಲ್ಲಿ ನಡೆದ" ಗರಿಗಳ ಕಥೆ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ 8–10 ನೇ ತರಗತಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

**ಭಜನಾ ಕಾರ್ಯಕ್ರಮ ಹಾಗೂ ಸಾಮೂಹಿಕ ಹುಟ್ಟುಹಬ್ಬ 30.06.2026**

ಶ್ರೀರಾಮ ಇಂಗ್ಲೀಷ್ ಮೀಡಿಯಂ ಸ್ಕೂಲ್‌ನಲ್ಲಿ ಜೂನ್ ತಿಂಗಳ ಭಜನಾ ಕಾರ್ಯಕ್ರಮ ಹಾಗೂ ಸಾಮೂಹಿಕ ಹುಟ್ಟುಹಬ್ಬವನ್ನು ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಮಾತಾಜಿಗಳು ಆರತಿ ಬೆಳಗಿ, ತಿಲಕಧಾರಣೆ ಮಾಡಿದರು. ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಶ್ರದ್ಧಾ ನಿಧಿ ಸಮರ್ಪಿಸಿದರು.

**ವಿಶ್ವ ಪರಿಸರ ದಿನಾಚರಣೆ 6.6.2026**

ಎನ್‌ಸಿಸಿ ಕೆಡೆಟ್‌ಗಳು, ಸಿಟಿಒ ಹಾಗೂ ಪ್ರಾಂಶುಪಾಲರ ನೇತೃತ್ವದಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಆಯೋಜಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಕೆಡೆಟ್‌ಗಳಿಗಾಗಿ ಪೋಸ್ಟರ್ ರಚನೆ ಹಾಗೂ ಘೋಷವಾಕ್ಯ ಬರವಣಿಗೆ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 50 ಕೆಡೆಟ್‌ಗಳು ಭಾಗವಹಿಸಿ, ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರುವ ತಮ್ಮ ಸೃಜನಶೀಲತೆಯನ್ನು ಪ್ರದರ್ಶಿಸಿದರು.

**ಪೇಪರ್ ಕ್ರಾಫ್ಟ್ ನ ಬಗ್ಗೆ ಪ್ರಾತ್ಯಕ್ಷಿಕೆ 16/06/2026**

ಇಂಗ್ಲೀಷ್ ಮೀಡಿಯಂ ಸ್ಕೂಲ್ ನಲ್ಲಿ ಶ್ರೀಯುತ ಗೋವಿಂದ ರಾವ್ ರವರು ಪೇಪರ್ ಕ್ರಾಫ್ಟ್‌ನ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ನೀಡಿದರು.

**ಶಾಲಾ ಸಂಸತ್ತು ಚುನಾವಣೆ 27.06.2026**

ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳ ಚುನಾವಣೆ ನಡೆಯಿತು. ವಿದ್ಯಾರ್ಥಿಗಳು google sheet ಮೂಲಕ ಮತದಾನ ಮಾಡಿದರು. 464 ವಿದ್ಯಾರ್ಥಿಗಳು ಮತ ಚಲಾಯಿಸಿದರು. ವಿದ್ಯಾರ್ಥಿ ನಾಯಕನಾಗಿ ಹತ್ತನೇ ತರಗತಿಯ ಸಾನಿಕ್, ಉಪನಾಯಕ ನಾಗಿ 9ನೇ ತರಗತಿಯ ನಿಧಿಷ್, ಆರೋಗ್ಯಮಂತ್ರಿಯಾಗಿ ಹತ್ತನೇ ತರಗತಿಯ ಚಿರಾಗ್, ಶಿಸ್ತುಮಂತ್ರಿಯಾಗಿ ಹತ್ತನೇ ತರಗತಿಯ ಪ್ರೀತಮ್, ಕ್ರೀಡಾ ಮಂತ್ರಿಯಾಗಿ 10ನೇ ತರಗತಿಯ ಶ್ರೀರಾಮ ಆಯ್ಕೆಯಾಗಿರುತ್ತಾರೆ.

## ಪದವಿ ಪೂರ್ವ

**ವಿಶ್ವ ಪರಿಸರ ದಿನಾಚರಣೆ 05.06.2026**




ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ದಿವ್ಯಶ್ರೀ ಜಿ. ನಾಯಕ್ ರವರು ಹಾಗೂ ಉಪಪ್ರಾಂಶುಪಾಲರಾದ ದಿನೇಶ್ ಶ್ರೀಮಾನ್ ರವರು ಗಿಡ ನೆಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಶ್ರೀಮತಿ ದಿವ್ಯಶ್ರೀ ಜಿ. ನಾಯಕ್‌ರವರು ಪರಿಸರ ಸಂರಕ್ಷಣೆಯ ಮಹತ್ವ ಮತ್ತು ಇಂದಿನ ದಿನಗಳಲ್ಲಿ ಅದರ ಅಗತ್ಯತೆ-ಯ ಬಗ್ಗೆ ವಿದ್ಯಾರ್ಥಿಗಳಿಗೆ ಸವಿಸ್ತಾರವಾಗಿ ತಿಳಿಸಿಕೊಟ್ಟರು.ವಿದ್ಯಾರ್ಥಿನಿಯರಾದ ಕೃತಿಕಾ ನಿರೂಪಿಸಿ, ಶ್ರೇಯ ವಂದಿಸಿದರು.

**ಕಾರ್ಯಾಗಾರ 4.6.2026**

ವಿವೇಕಾನಂದ ಪದವಿ ಪೂರ್ವ ಕಾಲೇಜು ಪುತ್ತೂರು ಇಲ್ಲಿ ನಡೆದ ವಿವೇಕ ನೈಪುಣ್ಯ – ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಕುರಿತು ಶಿಕ್ಷಕರಿಗೆ ಮಾಹಿತಿ ಕಾರ್ಯಾಗಾರದಲ್ಲಿ ಉಪನ್ಯಾಸಕರಾದ ಶ್ರೀಮತಿ ಶ್ವೇತಾ ಮಾತಾಜಿ ಮತ್ತು ಶ್ರೀಮತಿ ದೀಪಿಕಾ ಮಾತಾಜಿ ಭಾಗವಹಿಸಿರುತ್ತಾರೆ.

**ಥಾಲ್ ಸೈನಿಕ್ ಕ್ಯಾಂಪ್ 13.06.2026**

ಎಸ್.ವಿ.ಎಸ್ ಕಾಲೇಜು ಬಂಟ್ವಾಳನಲ್ಲಿ ಥಾಲ್ ಸೈನಿಕ್ ಕ್ಯಾಂಪ್ ಗಾಗಿ ನಡೆಸಿದ ಫೈ-ರಿಂಗ್ ಅಭ್ಯಾಸದಲ್ಲಿ ಎನ್ ಸಿ ಸಿ ಕೆಡೆಟ್ ಗಳಾದ ಸಿಂಚನ, ದೀಕ್ಷಿತ್, ಆಶ್ರಯ್, ದಿಗಂತ್ ಭಾಗವಹಿಸಿದರು.

**ಎನ್‌ಸಿಸಿ ಪರಿಚಯ ಕಾರ್ಯಕ್ರಮ 11.06.2026**



ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಎನ್‌ಸಿಸಿ ಪರಿಚಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ ಮಾಜಿ ಸೈನಿಕ, 18 ಕರ್ನಾಟಕ ಬೆಟಾಲಿಯನ್ ಮಂಗಳೂರಿನಲ್ಲಿ ಪಿ.ಐ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿರುವ ಯನ್.ಬಿ.ಪಾಟೀಲ್ ವಿದ್ಯಾರ್ಥಿಗಳಿಗೆ ಎನ್‌ಸಿಸಿಯ ಮಹತ್ವ ಮತ್ತು ಪ್ರಯೋಜನಗಳನ್ನು ಸವಿವರವಾಗಿ ತಿಳಿಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಪಪ್ರಾಂಶುಪಾಲರಾದ ಮತ್ತು ಎನ್‌ಸಿಸಿಯ ಸಿಟಿಒ ಆಗಿರುವ ದಿನೇಶ್ ಶ್ರೀಮಾನ್ ವಹಿಸಿದ್ದರು. ಕುಮಾರಿ ತ್ರಿಷಾ ಕಾರ್ಯಕ್ರಮ ನಿರ್ವಹಣೆ ಮಾಡಿದರು.

**ಸರಸ್ವತಿ ವಂದನಾ ಅಭ್ಯಾಸ 12.6.2026**

ವಿದ್ಯಾರ್ಥಿಗಳಿಗಾಗಿ ನಡೆದ ಸರಸ್ವತಿ ವಂದನಾ ಅಭ್ಯಾಸ ಕಾರ್ಯಕ್ರಮವನ್ನು ಪ್ರೌಢಶಾಲೆಯ ಸಹ ಶಿಕ್ಷಕಿ, ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾ ಸಂಗೀತ ಪ್ರಮುಖರಾದ ಶ್ರೀಮತಿ ಗಾಯತ್ರಿ ಮಾತಾಜಿ ನಡೆಸಿಕೊಟ್ಟರು.

**ಭಾರವಿ ಸಂಸ್ಕೃತ ಸಂಘ ಸುರಸರಸ್ವತೀ ಸಭಾ (ರಿ) ಶೃಂಗೇರಿ ಪ್ರವೇಶ ಸಂಸ್ಕೃತ ಪರೀಕ್ಷೆ 02.02.2026**

ಭಾರವಿ ಸಂಸ್ಕೃತ ಸಂಘದಿಂದ ಸುರಸರಸ್ವತೀ ಸಭಾ (ರಿ)ಶೃಂಗೇರಿ ಇವರಿಂದ ನಡೆಸಲ್ಪಡುವ ಪ್ರವೇಶ ಸಂಸ್ಕೃತ ಪರೀಕ್ಷೆ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಚಂದ್ರಕಲಾ, ಶ್ರದ್ಧಾ, ಇವರು ರಜತ ಪದಕ ಪಡೆದಿರುತ್ತಾರೆ.

**ವಿಶ್ವ ಯೋಗ ದಿನಾಚರಣೆ 20.06.2026**

ವಿಶ್ವ ಯೋಗ ದಿನಾಚರಣೆಯನ್ನು ಆಜಾದ್ ಸಭಾಂಗಣದಲ್ಲಿ ಭಾಮತಿ ವಾಣಿಜ್ಯ ಸಂಘದ ವತಿಯಿಂದ ಆಚರಿಸಲಾಯಿತು. ಅತಿಥಿಗಳಾಗಿ ಆಗಮಿಸಿದ ಶ್ರೀಯುತ ಗಣೇಶ್ ಇವರು ಯೋಗದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು. ಶ್ರೀಯುತ ಆನಂದ್ ಇವರು ಯೋಗದ ಪ್ರಾತ್ಯಕ್ಷಿಕೆಯನ್ನು ನೀಡುವುದರೊಂದಿಗೆ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸವನ್ನು ನಡೆಸಿಕೊಟ್ಟರು. ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

**ಅಂತರಾಷ್ಟ್ರೀಯ ಯೋಗ ದಿನಾಚರಣೆ 20.6.26**

ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ. ನಯನಶ್ರೀ(BNYS), ಶಾರದಾ ಯೋಗ ಮತ್ತು ನ್ಯಾಚುರೋಪತಿ ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆ, ಮಂಗಳೂರು ಇವರು ಆಗಮಿಸಿ, ದೀಪ ಪ್ರಜ್ವಲನೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಅವರು ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಬಳಿಕ ಶಾರದಾ ಯೋಗ ಮತ್ತು ನ್ಯಾಚುರೋಪತಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದ ಹಿರಿಯ ವಿದ್ಯಾರ್ಥಿನಿಯರಾದ ಕುಮಾರಿ ವಿಂಧ್ಯಾ ಶ್ರೀ ಮತ್ತು ಕುಮಾರಿ ನೇಹಾ ಅವರು ವಿವಿಧ ಯೋಗಾಸನಗಳು ಹಾಗೂ ಪ್ರಾಣಾಯಾಮಗಳನ್ನು ಪ್ರಾತ್ಯಕ್ಷಿಕೆಯೊಂದಿಗೆ ನಡೆಸಿಕೊಟ್ಟರು.

**ಹಿಂದೂ ಸಾಮ್ರಾಜ್ಯೋತ್ಸವ ಆಚರಣೆ 27.6.2026**




ಕಾರ್ಯಕ್ರಮವನ್ನು ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರು ಹಾಗೂ ವಿಟ್ಲ ತಾಲೂಕಿನ ಘೋಷ್ ಪ್ರಮುಖರಾದ ಶ್ರೀ ರಾಜಗೋಪಾಲ್ ಕಡೆಶಿವಾಲಯ, ದೀಪ ಪ್ರಜ್ವಲನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ-ದರು. ನಂತರ ಮಾತನಾಡಿದ ಅವರು ಛತ್ರಪತಿ ಶಿವಾಜಿ ಮಹಾರಾಜರ ಆದರ್ಶಮಯ ಜೀವನ, ದೇಶಪ್ರೇಮ, ಶೌರ್ಯ, ಆಡಳಿತ ವೈಖರಿ ಹಾಗೂ ಹಿಂದೂ ಸಾಮ್ರಾಜ್ಯ ಸ್ಥಾಪನೆಗಾಗಿ ಅವರು ಮಾಡಿದ ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ವಿಜ್ಞಾನ ವಿಭಾಗದ ಮುಖ್ಯಸ್ಥರು ಹಾಗೂ ಜೀವಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ಶೈಲಿನಿ ಅವರು ಉಪಸ್ಥಿತರಿದ್ದರು.

**ಮಾಸಿಕ ಭಜನೆ 29.06.2026**



ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಮಾಸಿಕ ಭಜನೆ ನಡೆಸಿದರು ಹಾಗೂ ಜೂನ್ ತಿಂಗಳ ಸಾಮೂಹಿಕ ಹುಟ್ಟುಹಬ್ಬ ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಮಾತಾಜಿಗಳು ಆರತಿ ಬೆಳಗಿ, ತಿಲಕಧಾರಣೆ ಮಾಡಿದರು. ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಶ್ರದ್ಧಾ ನಿಧಿ ಸಮರ್ಪಿಸಿದರು

**ಭಾರತಿ ಹಿಂದಿ ಸಂಘದ ಉದ್ಘಾಟನೆ 29.06.26**




ವಿವೇಕಾನಂದ ಸೆಂಟ್ರಲ್ ಸ್ಕೂಲ್ ನೆಹರು ನಗರ ಪುತ್ತೂರಿನ ಹಿಂದಿ ಶಿಕ್ಷಕಿ ಶ್ರೀಮತಿ ಪ್ರಫುಲ್ಲಾ ಕೆ ದೀಪ ಬೆಳಗಿಸಿ, ನಾಮಫಲಕದ ಅನಾವರಣ ಮಾಡುವ ಮೂಲಕ ಸಂಘವನ್ನು ವಿದ್ಯುಕ್ತವಾಗಿ ಉದ್ಘಾಟಿಸಿ ಮಾತನಾಡುತ್ತಾ ಹಿಂದಿ ಭಾಷೆಯ ಮಹತ್ವ, ಹಿಂದಿಯ ಪ್ರಾವೀಣ್ಯತಾ ಪರೀಕ್ಷೆಯ ಬಗ್ಗೆ ವಿವರಿಸಿದರು. ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಸಂಘದ ಧ್ಯೇಯೋದ್ದೇಶಗಳನ್ನು ವಿವರಿಸಿದರು . ಕಾರ್ಯಕ್ರಮದಲ್ಲಿ ಹಿಂದಿ ಸಂಘದ ನಿರ್ದೇಶಕಿ ಶ್ರೀಮತಿ ಅಶ್ವಿನಿ ಯನ್ ಉಪಸ್ಥಿತರಿದ್ದರು.

**ಅಂತರಾಷ್ಟ್ರೀಯ ಮಾದಕ ವಸ್ತು ವ್ಯಸನ ನಿವಾರಣೆ ಮತ್ತು ನಿಯಂತ್ರಣ ದಿನಾಚರಣೆ 25.06.2026**



ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಮಾದಕ ವ್ಯಸನದ ಅಪಾಯಗಳು, ಅದನ್ನು ತಡೆಗಟ್ಟುವ ಮಾರ್ಗಗಳು ಹಾಗೂ ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ವಿವರಿಸುವ ಜಾಗೃತಿ ವಿಡಿಯೋವನ್ನು ಪ್ರದರ್ಶಿಸಲಾಯಿತು. ಉಪನ್ಯಾಸಕರಾದ ರೇಷ್ಮಾ ಮಾತಾಜಿ, ನವ್ಯಶ್ರೀ ಮಾತಾಜಿ, ಶ್ರುತಿ ಮಾತಾಜಿ ಕಾರ್ಯಕ್ರಮವನ್ನು ಭಗೀರಥ ಮಾನವಿಕ ಸಂಘದಿಂದ ಆಯೋಜಿಸಿದರು.

**ವೃತ್ತಿ ಮಾರ್ಗದರ್ಶನ ಹಾಗೂ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ 30.06.2026**



ಭಗೀರಥ ಮಾನವಿಕ ಸಂಘದ ವತಿಯಿಂದ "ವೃತ್ತಿ ಮಾರ್ಗದರ್ಶನ ಮತ್ತು ಕೌಶಲ್ಯ ಅಭಿವೃದ್ಧಿ ಮಹತ್ವ" ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾದ ಕೇರಿಯರ್ ನೆಕ್ಸ್ಟ ಸಂಸ್ಥಾಪಕರಾದ ಶ್ರೀ ವೀಕ್ಷಿತ್ ಶೆಟ್ಟಿ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಇವರು ಮಾತನಾಡುತ್ತಾ ಜೀವನದಲ್ಲಿ ಯಶಸ್ಸು ಸಾಧಿಸಲು ಉತ್ತಮ ಕೌಶಲ್ಯ, ಶಿಸ್ತು, ಆತ್ಮವಿಶ್ವಾಸ ಹಾಗೂ ಸರಿಯಾದ ವೃತ್ತಿ ಮಾರ್ಗದರ್ಶನವೂ ಮುಖ್ಯ " ಎಂದು ತಿಳಿಸಿದರು. ಮಾನವಿಕ ಸಂಘದ ನಿರ್ದೇಶಕಿ ಶ್ರೀಮತಿ ನವ್ಯಶ್ರೀ ಬಿ. ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿದ್ಯಾರ್ಥಿನಿ ಯಶಿಕಾ ಸ್ವಾಗತಿಸಿ, ಜನನಿ ಅತಿಥಿಗಳನ್ನು ಪರಿಚಯಿಸಿ, ಶ್ರೀದೇವಿ ವಂದಿಸಿ, ದೀಕ್ಷಾ ನಿರೂಪಿಸಿದರು.

**ಎನ್‌ಸಿಸಿ ಘಟಕದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ 20.06.2026**



ಎನ್‌ಸಿಸಿ ಘಟಕದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆರ್ಟ್ ಆಫ್ ಲಿವಿಂಗ್ ನ ಯೋಗ ತರಬೇತುದಾರರಾದ ಶ್ರೀ ಸತೀಶ್ ಕುಮಾರ್, ಯೋಗ ಮನುಷ್ಯನ ದೇಹ, ಉಸಿರಾಟ ಮತ್ತು ಮನಸ್ಸನ್ನು ಸಮತೋಲನದಲ್ಲಿಡಲು ಸಹಕರಿಯಾಗಿದೆ ಎಂದು ತಿಳಿಸಿದರು. ಏಕಾಗ್ರತೆ ಹೆಚ್ಚಿಸುವ ಸರಳ ಪ್ರಾಣಾಯಾಮ, ಭಸ್ತ್ರಿಕಾ ಮತ್ತು ಸರಳ ವ್ಯಾಯಾಮಗಳನ್ನು ಕಲಿಸಿಕೊಟ್ಟರು. ವೇದಿಕೆಯಲ್ಲಿ ಆರ್ಟ್ ಆಫ್ ಲಿವಿಂಗ್ ನ ತರಬೇತುದರರಾದ ಶ್ರೀ ರಾಜಾರಾಮ್ ಐತಾಲ್, ಉಪಪ್ರಾಂಶುಪಾಲಾರಾದ ಶ್ರೀ ದಿನೇಶ್ ಶ್ರೀಮಾನ್ ಉಪಸ್ಥಿತರಿದ್ದರು.

## ಪದವಿ

**ಮಾರ್ಗದರ್ಶಿ UPSC ಪರೀಕ್ಷೆಯ ಕಾರ್ಯಗಾರದಲ್ಲಿ ಭಾಗಿ:**



ನಮ್ಮ ವಿಭಾಗದ ಆರು ವಿದ್ಯಾರ್ಥಿಗಳು 2026ರ ಜೂನ್ 28ರಂದು ,ಮಂಗಳೂರಿನ ರಾಮಕೃಷ್ಣ ಮಿಷನ್‌ನಲ್ಲಿ ನಡೆದ "ಮಾರ್ಗದರ್ಶಿ UPSC ಪರೀಕ್ಷೆಯಲ್ಲಿ ಯಶಸ್ಸು ಸಾಧಿಸುವುದು" ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮವನ್ನು Mangalore IAS ಸಂಸ್ಥೆಯು RACHANA Chamber of Commerce & Industry ಸಹಯೋಗದಲ್ಲಿ ಹಾಗೂ ರಾಮಕೃಷ್ಣ ಮಿಷನ್, ಮಂಗಳೂರು ಅವರ ಬೆಂಬಲದೊಂದಿಗೆ ಆಯೋಜಿಸಿತ್ತು.

ಈ ಕಾರ್ಯಕ್ರಮವು UPSC ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಪರೀಕ್ಷಾ ತಂತ್ರಗಳು, ಪಠ್ಯಕ್ರಮದ ಸಮಗ್ರ ಅಧ್ಯಯನ, ಸಮಯ ನಿರ್ವಹಣೆ ಹಾಗೂ ಸಂದರ್ಶನದ ಸಿದ್ಧತೆ ಕುರಿತು ಮಾರ್ಗದರ್ಶನ ನೀಡುವ ಉದ್ದೇಶವನ್ನು ಹೊಂದಿತ್ತು. Mangalore IAS ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ಪ್ರಿಲಿಮ್ಸ್, ಮೇನ್ಸ್ ಪರೀಕ್ಷೆಗಳ ಸಿದ್ಧತೆ, ಐಚ್ಛಿಕ ವಿಷಯದ ಆಯ್ಕೆ ಸೇರಿದಂತೆ ಹಲವು ಮಹತ್ವದ ವಿಷಯಗಳ ಕುರಿತು ಉಪಯುಕ್ತ ಮಾಹಿತಿಯನ್ನು ಹಂಚಿಕೊಂಡರು.




ವಿವಿಧ ವಿಭಾಗಗಳಲ್ಲಿ ವಿಶ್ವ ಯೋಗ ದಿನಾಚರಣೆ : 20.06.2026 – ಪ್ರಾಥಮಿಕ ಶಾಲೆಯಲ್ಲಿ ಶ್ರೀ ಯಶವಂತ ರಮೇಶ್ ಉಪ್ಪಾರ್ ರಿದಮಿಕ್ ಯೋಗ ಮಾಡಿದರು. ಕೆಲಿಂಜ ಶ್ರೀನಿಕೇತನ ಶಾಖೆ ಸಂಚಾಲಕರು ರಾಮಣ್ಣ, ವಿಟ್ಲ ಶಾಖೆಯ ಪತಂಜಲಿ ಯೋಗ ಸಂಘಟನಾ ಪ್ರಮುಖರು ಪ್ರಕಾಶ್, ಪ್ರೌಢಾಲೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಕೋಶಾಧಿಕಾರಿ ಶ್ರೀ ಸತೀಶ್ ಶಿವಗಿರಿ ಬಾಳ್ತಿಲ ಗ್ರಾಮ ಪಂಚಾಯತ್‌ನ, PDO ಶ್ರೀ ವಿಜಯಶಂಕರ ಆಳ್ವ, ಇಂಗ್ಲೀಷ್ ಮೀಡಿಯಂ ಸ್ಕೂಲ್‌ನಲ್ಲಿ ವಿದ್ಯಾಕೇಂದ್ರದ ಸಿ.ಇ.ಓ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಪ.ಪೂ ವಿಭಾಗದಲ್ಲಿ ಶ್ರೀಯುತ ಗಣೇಶ್ ಯೋಗದ ಬಗ್ಗೆ ಮಾಹಿತಿ ನೀಡಿದರು. ಎಲ್ಲಾ ವಿಭಾಗದ ಮುಖ್ಯಸ್ಥರು, ಯೋಗ ಶಿಕ್ಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.



ದಿನಾಂಕ 20.6.2026 ಮತ್ತು 21.6.2026 ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಶಿಶು ಶಿಕ್ಷಣ ಆಚಾರ್ಯ ಪ್ರಶಿಕ್ಷಣ ವರ್ಗ ನಡೆಯಿತು, ವರ್ಗದಲ್ಲಿ ಒಟ್ಟು 8 ತಾಲೂಕಿನಿಂದ 32 ಶಿಶು ಮಂದಿರದ 67 ಮಾತಾಜಿಯವರು ಉಪಸ್ಥಿತರಿದ್ದರು, ಸಂಪನ್ಮೂಲ ವ್ಯಕ್ತಿಗಳಾಗಿ ತಾರಾ ಮಾತಾಜಿ ಹಾಗೂ ವಿನುತ ಮಾತಾಜಿ ಮಾರ್ಗದರ್ಶನ ಮಾಡಿದರು.




**2025–26ನೇ ಸಾಲಿನ NMMS ಪರೀಕ್ಷೆಯಲ್ಲಿ ರ್‍ಯಾಂಕ್‌ಗಳಿಸಿ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾದ ಶ್ರೀರಾಮ ಪ್ರೌಢಶಾಲಾ ಪ್ರತಿಭಾನ್ವಿತ ವಿದ್ಯಾರ್ಥಿಗಳು**

2026–27ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಜೂನ್ 1ರಂದು ನಡೆಯಿತು. ಎಲ್ಲಾ ವಿದ್ಯಾರ್ಥಿಗಳನ್ನು ಪೋಷಕರು ಪೂರ್ಣಕುಂಭದಲ್ಲಿ ಸ್ವಾಗತಿಸಿ ಶಾಲಾ ಆವರಣಕ್ಕೆ ಕರೆತಂದು ಆರತಿ ಬೆಳಗಿ, ತಿಲಕವಿಟ್ಟರು. ನಂತರ ವಿದ್ಯಾರ್ಥಿಗಳು ಸರಸ್ವತಿ ಮಾತೆಗೆ ಪುಷ್ಪಾರ್ಚನೆ ಮಾಡಿ ಸಂಸ್ಥೆಯ ಹಿರಿಯರಿಂದ ಆಶೀರ್ವಾದ ಪಡೆದುಕೊಂಡರು. ಚೆಂಡೆ ವಾದ್ಯಘೋಷ ಹಾಗೂ ಬೊಂಬೆಗಳು ವಿಶೇಷ ಆಕರ್ಷಣೆಯಾಗಿತ್ತು.




ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 8147249173

**ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ**

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

ಚಿನ್ನಾಭರಣ ಸಾಲ – 11%
ಜಾಮೀನು ಸಾಲ – 16.5%
ಅಡವು ಸಾಲ – 13.5%
ವಾಹನ ಸಾಲ – 12%
ಗೃಹ ನಿರ್ಮಾಣ ಸಾಲ – 11.5%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

91ದಿನಗಳವರೆಗೆ – 7%
92ರಿಂದ 181 ದಿನಗಳು – 7.5%
182 ರಿಂದ 364 ದಿನಗಳು – 8.5%
1 ವರ್ಷ ಮತ್ತು ಮೇಲ್ಪಟ್ಟು – 9.5%

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2025-27 Licensed to Post without pre-payment License No: SK/WPP/PTR/117/2025-27

ಸರಯೂ

Vol. : 13 Issue :2 Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in, www.srvk.org
E-mail : sriramakalladka@gmail.com

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363